## ನಾಸಿರುದ್ದೀನ್‌ಗೆ 62



'ಬಾಲಿವುಡ್‌ನ ಶ್ರೇಷ್ಠ ನಟರಲ್ಲಿ ಒಬ್ಬ' ಎನ್ನಬಹುದಾದ ನಾಸಿರುದ್ದೀನ್ ಶಾ, 62 ಮುಗಿಸಿ 63ಕ್ಕೆ ಕಾಲಿಟ್ಟದ್ದು ದೊಡ್ಡ ಸುದ್ದಿಯಾಗಲೇ ಇಲ್ಲ. ನಾಸಿರ್ ಅಭಿನಯದ ವ್ಯಾಪ್ತಿ ಎಷ್ಟು ವಿಸ್ತಾರವಾಗಿದೆಯೆಂದರೆ, ಮೂರು ದಶಕಗಳ ಹಿಂದೆ ಬಂದ ಆತನ ಮೊದಲ ಚಿತ್ರ 'ನಿಶಾಂತ್'ನ ಪಾತ್ರದಂತೆಯೇ, ಇತ್ತೀಚೆಗೆ ಬಂದ 'ಡರ್ಟಿ ಪಿಕ್ಚರ್' ಪಾತ್ರವನ್ನೂ ಜನ ನೆನಪಿಸಿಕೊಳ್ಳುತ್ತಾರೆ. ಏಳು ಬೀಳುಗಳನ್ನು ಲೆಕ್ಕಿಸದೆ ಪ್ರತಿ ವರ್ಷವೂ ಹೊಸ ಚಿತ್ರಗಳಲ್ಲಿ ನಟಿಸುತ್ತಿರುವ ನಾಸಿರ್‌ಗೆ ಬಾಲಿವುಡ್‌ನಲ್ಲಿ ಇನ್ನೂ ಸೂಕ್ತ ಮನ್ನಣೆ ಸಿಕ್ಕಿಲ್ಲವೆಂದೇ ಹೇಳಬಹುದು. ಅದಕ್ಕೆ ಒಂದು ಕಾರಣ ಆತನ ಬಿಂದಾಸ್ ಮಾತುಗಳು. ಬಾಲಿವುಡ್‌ನ ಟೀಕಾತೀತ ಸೂಪರ್‌ಸ್ಟಾರ್ ಅಮಿತಾಭ್ ಬಚ್ಚನ್‌ನನ್ನೂ, ಬಾಲಿವುಡ್‌ನ ಸಾರ್ವಕಾಲಿಕ ದಾಖಲೆಯ 'ಶೋಲೇ' ಚಿತ್ರವನ್ನೂ ಏಕಕಾಲದಲ್ಲಿ ಯಾವುದೇ ಎಗ್ಗಿಲ್ಲದೆ ಟೀಕಿಸಬಲ್ಲ ತಾಖತ್ತು ಇರುವುದು ಬಹುಶಃ ನಾಸಿರ್ ಒಬ್ಬನಿಗೇ ಇರಬೇಕು. ಅಮಿತಾಭ್‌ನನ್ನು ಟೀಕಿಸಿದ್ದಕ್ಕೆ ಪ್ರತಿಯಾಗಿ ಆತನ ಅಭಿಮಾನಿಗಳು ಸೋಶ್ಯಲ್ ನೆಟ್‌ವರ್ಕ್‌ನಲ್ಲಿ ಶಾ ಮೇಲೆ ಮುಗಿಬಿದ್ದಾಗಲೂ, ಅದನ್ನು ಆತ ಗಣನೆಗೇ ತೆಗೆದುಕೊಳ್ಳಲಿಲ್ಲ.

ಹಾಗೆ ನೋಡಿದರೆ ಇಷ್ಟು ವರ್ಷಗಳಲ್ಲಿ ನಾಸಿರುದ್ದೀನ್ ಶಾ ನಟಿಸಿದ ಒಳ್ಳೆಯ ಚಿತ್ರಗಳನ್ನೂ ಕೈಬೆರಳಲ್ಲಿ ಎಣಿಸಬಹುದು. ಹೊಸ ಅಲೆಯ ಚಿತ್ರಗಳು ಬಿಡಿ; ಕಮರ್ಷಿಯಲ್ ಚಿತ್ರಗಳಲ್ಲೂ ತಮಾಷೆಯ ಪೇಲವ ಪಾತ್ರಗಳಲ್ಲಿ ನಾಸಿರ್ ನಟಿಸಿದ್ದೇ ಹೆಚ್ಚು. 'ಡರ್ಟಿ ಪಿಕ್ಚರ್'ನ ಪಾತ್ರವೂ ಹೇಳಿಕೊಳ್ಳುವಂಥದ್ದೇನಲ್ಲ. ಆ ಪಾತ್ರವನ್ನು ಯಾರು ಬೇಕಿದ್ದರೂ ಮಾಡಬಹುದು. ಮುಂಬೈ ಬಾಂಬ್ ಸ್ಫೋಟದ ಹಿನ್ನೆಲೆಯ ಕಥೆಯುಳ್ಳ 'ಎ ವೆಡ್‌ನೆಸ್‌ಡೇ' ಯಂತಹ ಸಶಕ್ತ ಪಾತ್ರಗಳು ನಾಸಿರ್‌ಗೆ ಮತ್ತೆ ಸಿಗಲಿಲ್ಲ. 'ಸರ್ಫರೋಜ್' ಚಿತ್ರದಲ್ಲಿ ಸಿಕ್ಕಿದಂತಹ ವಿಲನ್ ಪಾತ್ರಗಳೂ ಮತ್ತೆ ಲಭಿಸಲಿಲ್ಲ.

ಸದ್ಯಕ್ಕೆ 'ಎ ವೆಡ್‌ನೆಸ್ ಡೇ' ಮಾದರಿಯ ಇನ್ನೊಂದು ಚಿತ್ರದಲ್ಲಿ ನಾಸಿರ್ ನಟಿಸುತ್ತಿರುವುದು ಸುದ್ದಿಯಾಗಿದೆ. 'ಜಾನ್ ಡೇ' ಎಂಬ ಈ ಚಿತ್ರವನ್ನು ಸೋಲಮನ್ ಅಹಿಶೊರ್ ನಿರ್ದೇಶಿಸುತ್ತಿದ್ದಾರೆ. ರಣದೀಪ್ ಹೂಡಾ, ಶೆರ್ನಾಜ್ ಪಟೇಲ್ ಜತೆ ನಟಿಸುತ್ತಿರುವ ನಾಸಿರ್, ಈ ಚಿತ್ರದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಶ್ರೀಸಾಮಾನ್ಯನ ಪಾತ್ರ ವಹಿಸಿದ್ದಾರೆ.



ಎರಡು ವರ್ಷಗಳ ಹಿಂದೆ ಬಂದ ಸೂಪರ್‌ಹಿಟ್ 'ಇಷ್ಕಿಯಾ' ಚಿತ್ರದ ಎರಡನೆ ಭಾಗ ಸಿದ್ಧವಾಗುತ್ತಿದೆ. ಅದರಲ್ಲೂ ಅರ್ಶದ್ ವಾರ್ಸಿ ಜತೆಗೆ ಶಾ ನಟಿಸುತ್ತಿದ್ದು, ವಿದ್ಯಾ ಬಾಲನ್ ಬದಲಿಗೆ ಮಾಧುರಿ ದೀಕ್ಷಿತ್ ಮತ್ತು ಕಂಗನಾ ಮುಖ್ಯ ಭೂಮಿಕೆಯಲ್ಲಿದ್ದಾರೆ. 2013ರಲ್ಲಂತೂ ನಾಸಿರ್ ನಟಿಸಿ ಬಿಡುಗಡೆಯಾಗಲಿರುವ ಚಿತ್ರಗಳ ಪಟ್ಟಿ ಉದ್ದವೇ ಇದೆ. ರತ್ನಾ ಪಾಠಕ್ ಜತೆ 'ದಿ ಕಾಫಿನ್ ಮೇಕರ್', ರಘುವೀರ್ ಯಾದವ್ ಜತೆ 'ದಿ ಫಾಲಿಂಗ್', ಜಾನಿ ಲಿವರ್, ಮೌಸಮಿ ಚಟರ್ಜಿ ಜತೆ 'ನಿದಾರ್– ದಿ ಫಿಯರ್‌ಲೆಸ್', ಕೆ.ಕೆ.ಮೆನನ್, ಟುಲಿಪ್ ಜೋಶಿ ಜತೆಗೆ 'ಶೂನ್ಯ'– ಹೀಗೆ ಪಟ್ಟಿ ಮುಂದುವರಿಯುತ್ತದೆ.

ವಯಸ್ಸನ್ನೂ ಮೀರಿ ನಟನೆಯಲ್ಲಿ ಮಿಂಚುತ್ತಿರುವ ಅಭಿಜಾತ ಪ್ರತಿಭೆ ನಾಸಿರ್ ಎನ್ನುವುದರಲ್ಲಿ ಎರಡು ಮಾತಿಲ್ಲ. ಬಹುಶಃ ರಂಗಭೂಮಿಯ ಅನುಭವದ ಹಿನ್ನೆಲೆಯೇ ಇದಕ್ಕೆ ಕಾರಣ ಇರಬೇಕು.

## ಬ್ಯುಸಿ ಮಾಧುರಿ

ಮದುವೆಯಾಗಿ ವಿದೇಶಕ್ಕೆ ಹಾರಿದ ಬಾಲಿವುಡ್‌ನ ಬಹುತೇಕ ನಟಿಯರು ಬರಿಗೈಲಿ ವಾಪಸ್ ಬಂದದ್ದೇ ಹೆಚ್ಚು. ಆದರೆ ಮಾಧುರಿ ದೀಕ್ಷಿತ್ ಮಾತ್ರ ಅಮೆರಿಕದ ಮೋಹ ತೊರೆದು ಮುಂಬೈಗೆ ಸಂಸಾರ ಸಮೇತ ವಾಪಸ್ಸಾದವಳು. ಅಮೆರಿಕದ ದೊಡ್ಡ ಆಸ್ಪತ್ರೆಗಳಲ್ಲಿ ಕೈತುಂಬ ಸಂಬಳ ಪಡೆಯುತ್ತಿದ್ದ ಗಂಡ ಡಾ.ಶ್ರೀರಾಮ್ ನೆನೆಯನ್ನು ಕರೆತಂದು ಮುಂಬೈಯ ಮುನ್ಸಿಪಾಲಿಟಿ ಆಸ್ಪತ್ರೆಗಳಲ್ಲಿ ದುಡಿಯಲು ಹಚ್ಚಿಸಿದ್ದೂ ಮಾಧುರಿಯ ಸಾಧನೆಯೇ. ಮುಂಬೈಯಲ್ಲಿ ಪಂಚತಾರಾ ಆಸ್ಪತ್ರೆಗಳು ಕರೆದರೂ ಶ್ರೀರಾಮ ನೆನೆ ಹೋಗುತ್ತಿಲ್ಲವಂತೆ.

ಸದ್ಯಕ್ಕಂತೂ ಮಾಧುರಿ ಚಾರಿಟಿ ಕೆಲಸಗಳಲ್ಲಿ ಬ್ಯುಸಿ. ಕಳೆದ ವಾರ ಪುಣೆಯಲ್ಲಿ ರಕ್ತದಾನ ಶಿಬಿರದಲ್ಲಿ ಭಾಗವಹಿಸಿದ್ದ ಮಾಧುರಿ ಮಳೆಗಾಗಿ ಪ್ರಾರ್ಥಿಸಿ, ತನ್ನ 'ದಿಲ್ ತೊ ಪಾಗಲ್ ಹೈ' ಸಿನಿಮಾದ ಮಳೆ ಹಾಡೊಂದನ್ನು ಹಾಡಿದ್ದೂ ದೊಡ್ಡ ಸುದ್ದಿಯಾಯಿತು. ಸದ್ಯಕ್ಕೆ 'ದೇಢ್ ಇಶ್ಕಿಯಾ' ಚಿತ್ರವಲ್ಲದೆ, ಅನುಭವ್ ಸಿನ್ಹಾ ನಿರ್ದೇಶನದ 'ಗುಲಾಬ್ ಗ್ಯಾಂಗ್' ಚಿತ್ರಕ್ಕೂ ಸಹಿ ಹಾಕಿರುವ ಮಾಧುರಿ, ಇನ್ನೊಂದೆಡೆ ಟೀವಿಯ ಡ್ಯಾನ್ಸ್ ಷೋ 'ಜಲಕ್ ದಿಖ್ಲಾ ಜಾ' ತೀರ್ಪುಗಾರ್ತಿಯಾಗಿಯೂ ತೊಡಗಿಸಿಕೊಂಡಿದ್ದಾಳೆ.

■ ಬಿಂದು